**ದಿನಾಂಕಃ 24.01.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲು : ವಾದಿಯ ಪರ ಪರ ಶ್ರೀ ಪಿ.ವಿ.ಪಿ. ವಕೀಲರಿಂದಃ**

2. ನಾನು ಹೋಮ್ ಗಾರ್ಡ್ಸ್ ನಲ್ಲಿ ಕೆಲಸ ಮಾಡಿ ಈಗ ನಿವೃತ್ತನಾಗಿದ್ದೇನೆ. ಪ್ರಮಾಣ ಪತ್ರ ಸಲ್ಲಿಸುವ ಮುಂಚೆ ಈ ದಾವೆಯಲ್ಲಿ ಎಷ್ಟು ಮಂದಿ ಪ್ರತಿವಾದಿಗಳಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ನನ್ನ ತಂದೆ ಶಿವಪ್ಪ ಮತ್ತು ತಾಯಿ ಪಾರ್ವತಮ್ಮನಿಗೆ ಒಟ್ಟು 6 ಜನ ಮಕ್ಕಳು ಎಂದರೆ ಸರಿ. ದಾವಾ ಆಸ್ತಿಗಳು ನನ್ನ ತಾತ ಮತ್ತು ತಂದೆಯಿಂದ ಬಂದ ಆಸ್ತಿಗಳು ಎಂದರೆ ಒಂದು ಆಸ್ತಿ ತಾತನಿಂದ ಬಂದಿದೆ ಮತ್ತು ಇನ್ನೊಂದು ಆಸ್ತಿ ನನ್ನ ತಂದೆ-ತಾಯಿಯ ಆಸ್ತಿ ಇರುತ್ತದೆ. ತಾತನಿಂದ ಬಂದ ಆಸ್ತಿ ಯಾವುದು? ಎಂದರೆ ಸರ್ವೇ ನಂ. 419/3 ಇರುತ್ತದೆ. ನನ್ನ ತಂದೆಯಿಂದ ಬಂದ ಆಸ್ತಿ ಯಾವುದು? ಎಂದರೆ ಸರ್ವೇ ನಂ. 698 ಬಿ/1 ಇರುತ್ತದೆ. ಸರ್ವೇ ನಂ. 549/ಎ 1 ನನ್ನ ಅಜ್ಜನಿಂದ ಬಂದಿತ್ತು. ಸರ್ವೇ ನಂ. 698 ಬಿ/1 ನ್ನು ನನ್ನ ತಂದೆ ಸ್ವಂತವಾಗಿ ಖರೀದಿ ಮಾಡಿದ್ದರು. ನನ್ನ ತಂದೆ ದಿನಾಂಕ 06.08.1994 ರಂದು ಮೃತಪಟ್ಟರು ಎಂದರೆ ಸರಿ. ನನ್ನ ತಾಯಿ 1999 ರಲ್ಲಿ ಮೃತಪಟ್ಟರು ಎಂದರೆ ಸರಿ. ನನ್ನ ತಂದೆ-ತಾಯಿ ಜೀವಂತ ಇರುವಾಗ ನನ್ನ ತಂದೆ ಮತ್ತು ಅವರ ಮಕ್ಕಳ ನಡುವೆ ಯಾವುದೇ ಪಾಲುವಿಭಾಗ ಆಗಿರಲಿಲ್ಲ ಎಂದರೆ ಸರಿ. ಪ್ರಮಾಣ ಪತ್ರ ಸಲ್ಲಿಸುವ ಮುಂಚೆ ನಾನು ಐಟಂ ನಂ. 4 ನ್ನು ದಾವೆಗೆ ಸೇರಿಸಿರುವ ಬಗ್ಗೆ ಅರಿತುಕೊಂಡಿದ್ದೀನಾ? ಎಂದರೆ ಇಲ್ಲ. ಈ ದಾವೆಯಲ್ಲಿ ವಾದಿಯು ಅವಶ್ಯಕ ಪಕ್ಷಕಾರರು ಎಲ್ಲರನ್ನೂ ಸೇರಿಸಿರುವ ಬಗ್ಗೆ ಅರಿತುಕೊಂಡಿದ್ದೀರಾ? ಎಂದರೆ ವಾದಿ ಸೇರಿಸಿರಲಿಲ್ಲ, ನಾನೇ ಎಲ್ಲಾ ಪಕ್ಷಕಾರರನ್ನೂ ದಾವೆಗೆ ಸೇರಿಸಿದ್ದೇನೆ.

3. ಇಸವಿ 2000 ದಲ್ಲಿ ಯಾವ ದಿನಾಂಕ ಮತ್ತು ತಿಂಗಳಿನಲ್ಲಿ ನಮ್ಮ ನಡುವೆ ಬಾಯಿಮಾತಿನ ಪಾಲುವಿಭಾಗವಾಗಿತ್ತು? ಎಂದರೆ ನನಗೆ ನೆನಪಿಲ್ಲ. ಆ ಬಾಯಿಮಾತಿನ ಪಾಲುವಿಭಾಗ ನಡೆದಾಗ ಹಿರಿಯರಾಗಿ ನನ್ನ ಚಿಕ್ಕಪ್ಪಂದಿರು ಶಿವಾನಂದಪ್ಪ ಮತ್ತು ವಿಶ್ವನಾಥಪ್ಪ ಹಾಜರಿದ್ದರು. ಅವರಿಬ್ಬರನ್ನೂ ಸಾಕ್ಷಿಗಳಾಗಿ ಕರೆಯಿಸಿ ಬಾಯಿಮಾತಿನ ಪಾಲುವಿಭಾಗದ ಬಗ್ಗೆ ಸಾಕ್ಷಿ ಹೇಳಿಸಲು ಅವಕಾಶವಿದೆ ಎಂದರೆ ಅವರಿಬ್ಬರೂ ಈಗ ಮೃತಪಟ್ಟಿದ್ದಾರೆ. ಬಾಯಿಮಾತಿನ ವಿಭಾಗವನ್ನು ಬರವಣಿಗೆ ಮಾಡಲಾಗಿತ್ತೇ? ಎಂದರೆ ಬರವಣಿಗೆ ಮಾಡಿ ರಿಜಿಸ್ಟ್ರೇಶನ್ ಕೂಡಾ ಮಾಡಿಸಿದ್ದೇವೆ. ನಾನು ನೋಂದಾಯಿತ ಪಾಲುವಿಭಾಗ ಪತ್ರವನ್ನು ಹಾಜರು ಮಾಡಿದ್ದೇನೆ. ಆ ಪಾಲುವಿಭಾಗ ಪತ್ರದ ಪ್ರಕಾರವೇ ನಾನು ಖಾತೆ ಬದಲಾವಣೆ ಮಾಡಿಸಿಕೊಂಡಿದ್ದೇನೆ. ನಮ್ಮ ಕುಟುಂಬದಲ್ಲಿ ಯಾವುದೇ ಬಾಯಿಮಾತಿನ ಅಥವಾ ನೋಂದಾಯಿತ ವಿಭಾಗ ಪತ್ರ ಆಗದೇ ಇದ್ದರೂ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯು ಈ ದಾವೆಯಲ್ಲಿ ಯಾವ ಯಾವ ದಾಖಲೆ ಹಾಜರು ಮಾಡಿದ್ದಾರೆಂದು ತಿಳಿದುಕೊಂಡಿದ್ದೇನೆ. 2009 ನೇ ಇಸವಿಯಲ್ಲಿ ಸರ್ವೇ ನಂ. 698 ಬಿ/1 ಜಮಿನೀನ ಹಕ್ಕು ಬದಲಾವಣೆ ಪಡೆದುಕೊಂಡಾಗ ಅದರ ಖಾತೆ ಇನ್ನೂ ನಮ್ಮ ತಂದೆಯ ಹೆಸರಿನಲ್ಲಿಯೇ ಇತ್ತು ಎಂದರೆ ನನಗೆ ಸರಿಯಾಗಿ ನೆನಪಿಲ್ಲ. ನಿಪಿ 5 ಮ್ಯುಟೇಶನ್ ರಿಜಿಸ್ಟ್ರೇಶನ್ ನಲ್ಲಿ ನಾನು, ವೀರಣ್ಣ ಮತ್ತು ಚನ್ನಪ್ಪ ಮೂವರೂ ದಿನಾಂಕ 13.12.2009 ರಂದು ಆಗಿರುವ ಪಾಲು ಪಟ್ಟಿ ಪ್ರಕಾರ ಖಾತೆ ಬದಲಾವಣೆ ಮಾಡಿಸಿಕೊಂಡಿದ್ದೇವೆಂದು ನಮೂದಾಗಿದೆ ಎಂದರೆ ಸರಿ. ಐಟಂ ನಂ. 4 ನ್ನು ನನ್ನ ಅಣ್ಣ ಪ್ರಕಾಶ ಖಾತೆ ಬದಲಾವಣೆ ಮಾಡಿಸಿಕೊಳ್ಳುವ ಮುಂಚೆ ಆ ಜಮೀನೂ ಕೂಡಾ ನನ್ನ ತಂದೆಯ ಹೆಸರಿನಲ್ಲೇ ಇತ್ತು

ಎಂದರೆ ಸರಿ. ಆತ ಕೂಡಾ ದಿನಾಂಕ 13.12.2009 ರ ಪಾಲುವಿಭಾಗ ಪತ್ರ ಎಂದು ಅರ್ಜಿ ಕೊಟ್ಟು ಖಾತೆ ಬದಲಾವಣೆ ಮಾಡಿಸಿಕೊಂಡಿದ್ದಾನೆ ಎಂದರೆ ಸರಿ. ದಿನಾಂಕ 13.12.2009 ರ ಪಾಲುವಿಭಾಗ ಪತ್ರ ನೋಂದಣಿಯಾಗಿದೆಯೇ ? ಎಂದರೆ ನನಗೆ ನೆನಪಿಲ್ಲ. ಸದರಿ ಪಾಲುವಿಭಾಗ ಪತ್ರಕ್ಕೆ ನನ್ನ ಸಹೋದರಿಯರ ಸಹಿಗಳನ್ನು ಪಡೆದುಕೊಂಡಿಲ್ಲ ಎಂದರೆ ಸರಿ. ದಾವಾ ಐಟಂ ನಂ. 2 ರ ಖಾತೆ ಬದಲಾವಣೆಯನ್ನು ದಿನಾಂಕ 14.03.2016 ರ ಪಾಲುವಿಭಾಗದ ಪ್ರಕಾರ ಖಾತೆ ಬದಲಾವಣೆ ಮಾಡಲಾಗಿದೆ ಎಂದು ನಮೂದಾಗಿದ್ದು 2016 ರ ಪಾಲುವಿಭಾಗ ಪತ್ರ ನೋಂದಣಿಯಾಗಿತ್ತೇ? ಎಂದರೆ ಆಗಿತ್ತು. ನೋಂದಾಯಿತ ಪಾಲುವಿಭಾಗ ಪತ್ರಗಳನ್ನು ಕೋರ್ಟಿಗೆ ಹಾಜರು ಮಾಡಲು ನನಗೆ ತೊಂದರೆ ಇಲ್ಲ ಎಂದರೆ ಸರಿ. 2016 ರ ಪಾಲುವಿಭಾಗ ಪತ್ರಕ್ಕೆ ಕೂಡಾ ನನ್ನ ಸಹೋದರಿಯರ ಸಹಿಗಳನ್ನು ಪಡೆದಿಲ್ಲ ಎಂದರೆ ಸರಿ. ವಾದಿಗೆ ಪಾಲುವಿಭಾಗ ನೀಡದೇ ಮೋಸ ಮಾಡಬೇಕೆಂಬ ಉದ್ದೇಶದಿಂದ ನಾನು ಮತ್ತು 2 ರಿಂದ 5 ನೇ ಪ್ರತಿವಾದಿಗಳು ಈ ಎಲ್ಲಾ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ದಿನಾಂಕ 13.12.2009 ಮತ್ತು 14.03.2016 ರಂದು ಆಗಿವೆ ಎನ್ನಲಾದ ಪಾಲುವಿಭಾಗಗಳು ವಾದಿಯ ಹಿಸ್ಸೆ ಹಕ್ಕಿನ ಮೇಲೆ ಯಾವ ರೀತಿಯಲ್ಲೂ ಬಂಧಕವಾಗುವುದಿಲ್ಲ ಎಂದರೆ ವಾದಿಗೆ ನಮ್ಮ ತಂದೆ ಖರ್ಚು ಮಾಡಿ ಮದುವೆ ಎಲ್ಲಾ ಮಾಡಿಕೊಟ್ಟಿರುವುದರಿಂದ ಹಿಸ್ಸೆಯ ಹಕ್ಕು ಇರುವುದಿಲ್ಲ. ದಾವಾ ಹಾಕುವ ಮುಂಚೆ ವಾದಿಯು ನಮ್ಮನ್ನೆಲ್ಲಾ ಭೇಟಿ ಮಾಡಿ ಪಾಲುವಿಭಾಗ ಕೊಡುವಂತೆ ಕೇಳಿದ್ದರು ಎಂದರೆ ನನ್ನನ್ನು ಕೇಳಿಲ್ಲ. ನಾವೆಲ್ಲಾ ಹಿಸ್ಸೆ ಕೊಡಲು ನಿರಾಕರಿಸಿದ್ದರಿಂದ ವಾದಿಯು ಈ ದಾವೆ ಸಲ್ಲಿಸಿದ್ದಾರೆ ಎಂದರೆ ನನ್ನನ್ನು ಕೇಳಿಲ್ಲ, ಕೇಳಿದ್ದರೆ ನಾನು ಸ್ವಲ್ಪ ಭಾಗ ಕೊಡಲು ಸಿದ್ಧನಿದ್ದೆ. ನಾನು ವಾದಿಗೆ ದಾವಾ ಐಟಂ ನಂ. 2 ರಲ್ಲಿ 3 ಸೆಂಟ್ಸ್ ಜಮೀನು ಕೊಡಲಿಕ್ಕೆ ಸಿದ್ಧನಿದ್ದೆ. ನನ್ನ ಉಳಿದ ಸಹೋದರರು ಕೂಡಾ ವಾದಿಗೆ ಆಸ್ತಿ ಕೊಡಲು ಸಿದ್ಧರಿದ್ದಾರೆಯೇ? ಎಂದರೆ ಅವರ ವಿಚಾರ ನನಗೆ ಗೊತ್ತಿಲ್ಲ. ದಾವೆ ಹಾಕಿದ ನಂತರ ನಾನು ಮತ್ತು ನನ್ನ ಸಹೋದರರು ವಾದಿಗೆ ಭಾಗ ಕೊಡುವ ಬಗ್ಗೆ ಕಲೆತು ವಿಚಾರ ಮಾಡಿದ್ದುಂಟೇ? ಎಂದರೆ ಮಾಡಿಲ್ಲ. ದಾವಾ ಸ್ವತ್ತುಗಳಲ್ಲಿ ನನಗೆಷ್ಟು ಹಕ್ಕು ಇದೆಯೋ ಅಷ್ಟೇ ಹಕ್ಕು ವಾದಿಗೂ ಇರುವುದರಿಂದ ಈ ದಾವೆ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ವಾದಿಗೆ ಭಾಗ ಕೊಡಬೇಕಾಗುತ್ತದೆ ಎಂಬ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ).

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಹೂವಿನ ಹಡಗಲಿ.**